**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಕಡೂರು.**

**ಸಿ.ಸಿ. 1864/2024**

ಫಿರ್ಯಾದಿಃ ಶ್ರೀ ಶಶಿಕುಮಾರ ಎಲ್.ಎಂ ಬಿನ್ ಮಂಜುನಾಥ,
ಸುಮಾರು 30 ವರ್ಷ ವಯಸ್ಸು,
ಕೆನರಾ ಬ್ಯಾಂಕ್ (ಹೆಚ್.ಎಸ್.ಬಿ.ಸಿ) ಜೀವ ವಿಮಾ ಹಿರಿಯ ವ್ಯವಸ್ಥಾಪಕರು, ವಾಸಃ ಲಕ್ಷ್ಮೀಪುರ ಗ್ರಾಮ,
ಬಿಸ್ಲೇಹಳ್ಳಿ ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀ ಪ್ರಭು ಎನ್.ಎನ್ ಬಿನ್ ನಾಗರಾಜು,
ಸುಮಾರು 31 ವರ್ಷ, ವ್ಯವಸಾಯ,
ವಾಸಃ ಲಕ್ಷ್ಮೀಪುರ ಗ್ರಾಮ,ಬಿಸ್ಲೇಹಳ್ಳಿ ಅಂಚೆ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಃಆಪಾದನೆಃ**

ಫಿರ್ಯಾದುದಾರರು ಹಾಗೂ ಆರೋಪಿತರು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ಪಿರ್ಯಾದುದಾರರಿಂದ ಕೌಟುಂಬಿಕ ನಿರ್ವಹಣೆ ಹಾಗೂ ಅಗತ್ಯತೆಗಾಗಿ ರೂ.3,00,000/- ಸಾಲವನ್ನು ದಿನಾಂಕಃ 20.04.2024 ರಂದು ಪಡೆದಿದ್ದು, ಅದನ್ನು ಮರುಪಾವತಿಸಲು ಆಗದೆ, ಸದರಿ ಭಾದ್ಯತೆಯ ಮರು ಪಾವತಿಗಾಗಿ ಪಿರ್ಯಾದುದಾರರ ಬ್ಯಾಂಕಿನ ಹೆಸರಿಗೆ ರೂ.3,00,000/- ಕೆನರಾ ಬ್ಯಾಂಕ್, ಸಖರಾಯಪಟ್ಟಣ ಶಾಖೆ, ಚೆಕ್ ನಂಃ 049380 ರ ಚೆಕ್ಕಿನಲ್ಲಿ ದಿನಾಂಕ ಃ 24.05.2024 ಎಂದು ನಮೂದು ಮಾಡಿ ಪಿರ್ಯಾದುದಾರರ ಬ್ಯಾಂಕಿಗೆ ನೀಡಿದ್ದು, ಸದರಿ ಪಿರ್ಯಾದುದಾರರು ತನ್ನ ಶಾಖೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಡೂರು ಶಾಖೆಯ ಮುಖಾಂತರ ದಿನಾಂಕಃ 24.05.2024 ರಂದು ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು "Funds Insufficient" ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹ ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕಃ 31.05.2024 ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ

ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರ ಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ ಃ ಇಲ್ಲ, ವಿಚಾರಣೆಯಾಗಬೇಕು

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 20 ನೇ ಮೇ 2025.

ಸಹಿ/-

**(ಸವಿತರಾಣಿ ಹೆಚ್.ವಿ.),**
ಸಮವರ್ತಿ ಪ್ರಭಾರ ಪ್ರಧಾನ ಸಿವಿಲ್
ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಕಡೂರು.